ಅ) ಹಾಗಿಲ್ಲದಿದ್ದಲ್ಲಿ ಯಾವಾಗ ಪೂರ್ಣ ಪ್ರಮಾಣದ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲಾಗುವುದು ?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಕ್ಯಾನ್ಸರ್ ರೋಗಿಗಳಿಗೆ ಸಹಾಯ ಆಗುವಂತೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ ಕ್ಯಾನ್ಸರ್ ಚಿಕಿತ್ಸಾ ಘಟಕವನ್ನು ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಮಂಗಳೂರಿನಲ್ಲಿ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಸೂಕ್ತವಾದ ಸರ್ಕಾರಿ ಅಥವಾ ಉಚಿತವಾಗಿ ಕಟ್ಟಡವು ಇದುವರೆವಿಗೂ ದೊರೆತಿರುವುದಿಲ್ಲವಾದ ಕಾರಣ ಅಲ್ಲಿ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ.

ಬಾಡಿಗೆ ರಹಿತ ಸೂಕ್ತ ಕಟ್ಟಡವು ಲಭ್ಯವಾದ ನಂತರ, ಯೋಜನೆಯಡಿಯ ಆಯವ್ಯಯ ಅವಕಾಶವನ್ನು ಅವಲಂಬಿಸಿ, ಮಂಗಳೂರಿನಲ್ಲಿ ಪೂರ್ಣ ಪ್ರಮಾಣದ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯನ್ನು ಕ್ಯಾನ್ಸರ್ ಚಿಕಿತ್ಸಾ ಘಟಕಗಳನ್ನು ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಸ್ಥೆಯಲ್ಲಿ ಹಣಕಾಸಿನ ಆದ್ಯತೆಯ ಮೇರೆಗೆ ಹಂತ ಹಂತದಲ್ಲಿ ಪ್ರಾರಂಭಿಸಲಾಗುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಗೊಂಡಂತೆ ಪೂರ್ಣ ಪ್ರಮಾಣದ ಕ್ಯಾನ್ಸರ್ ಚಿಕಿತ್ಸಾ ಘಟಕವನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು : ಈಗ ರಕ್ತದಾನ ಕಾರ್ಯಕ್ರಮ ಪ್ರಾರಂಭವಾಗಿದೆ. ಕೇವಲ 8 ಜನ ಶಾಸಕರು ಹೋಗಿ ರಕ್ತದಾನ ಮಾಡಿದ್ದಾರೆ. ದಯಮಾಡಿ ನಮ್ಮ ಅನೇಕ ಜನ ಶಾಸಕರು ಯುವಕರು ಯಾರಿದ್ದೀರಿ, ಅವರುಗಳು ರಕ್ತದಾನ ಮಾಡುವುದಕ್ಕೆ ಅವಕಾಶ ಸಿಕ್ಕಿದೆ. ದಯಮಾಡಿ ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ರಕ್ತದಾನ ಮಾಡಿ ಎಂದು ಹೇಳುತ್ತೀರಿ, ಖರ್ಗೆಯವರು ಇಂಥಹವರದು ಕೆಟ್ಟ ರಕ್ತ, ಅದು ಇಂಥಹ ರಕ್ತ ಎಂದು ಇಲ್ಲಿ ಪ್ರಾರಂಭ ಮಾಡುತ್ತಾರೆ, ಈ ಸುದ್ದಿ ಪತ್ರಿಕೆಗೆ ಹೋಗುತ್ತದೆ. ಅವರು ಮನೆ ಹೆಂಗಸರುಗಳು ಆ ಪತ್ರಿಕೆಯನ್ನು ನೋಡಿ ಕೆಲವರು ಬಹಳ ಅಪಾಯಕ್ಕೆ ಸಿಕ್ಕಿಬಿಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಈ ಸದನದಲ್ಲಿ ಈ ತರಹ ಮಾತನಾಡುವುದು ಸರಿಯಲ್ಲ. ಏಕೆಂದರೆ ಬಹಳ ಅಪಾಯಕ್ಕೆ ಸಿಕ್ಕುತ್ತೇವೆ. ನೀವು ರಕ್ತದಾನ ಮಾಡಿ ಎಂದು ಹೇಳುವುದು, ನಮ್ಮ ಸ್ನೇಹಿತರು ಅನೇಕ ಜನರು ನಿನ್ನೆ ದಿವಸ ರಕ್ತದಾನ ಮಾಡಿ ಪಜೀತಿಗೆ ಸಿಕ್ಕಿದ್ದಾರೆ. ಮತ್ತೆ ಖರ್ಗೆಯವರು ಇಂಥವರ ರಕ್ತ ಬೇಡ ಎಂದು ಹೇಳುತ್ತಾರೆ. ಅದು ಪತ್ರಿಕೆಯಲ್ಲಿ ಬಂದು, ಓದಿ ಮೂರು-ನಾಲ್ಕು ಜನರನ್ನು ಅವರ ಮನೆಯವರು ಹೊರಗೆ ಹಾಕಿದ್ದಾರೆ. ಅವರನ್ನು ಸರಿಪಡಿಸುವವರು ಯಾರು ಹೇಳಿ ?

(ನಗು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಾಕ್ಟರು ನಾಗೇಗೌಡರ ರಕ್ತವನ್ನು ಪರೀಕ್ಷೆ ಮಾಡಿ ನೋಡಿದ್ದಾರಂತೆ, ಅವರಿಗೆ ಯಾವ ತಾಪತ್ರಯವು ಇಲ್ಲ ಎಂದು ಹೇಳಿ ಈಗಾಗಲೇ ಡಾಕ್ಟರ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಅದಕ್ಕಾಗಿ ಯಾರೂ ಕೂಡ, ಅವರ ಮನೆಯವರು ಆಗಲಿ, ಬೇರೆಯವರಾಗಲಿ ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಅನೇಕ ಸಂದರ್ಭದಲ್ಲಿ ರಕ್ತ ಅಂತಲೇ ಅಲ್ಲ ಸತ್ಯ ಹೇಳಿದಾಗ ಕೆಲವರ ಮನೆಗಳಲ್ಲಿ ಇಕ್ಕಟ್ಟಾಗುತ್ತದೆ. ಅದು ನಿಜ, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ತಾವು ನಮ್ಮ ಹೆಸರುಗಳನ್ನು ಸೂಚನೆ ಮಾಡುವಾಗ ನಮ್ಮದು ಒಂದೊಂದು ಮನೆ ಇದೆ. ಆದರೆ ದಯವಿಟ್ಟು ತಾವು ಓದಿಬೇಡಿ. ತಾವು ಪತ್ರಿಕೆಯಲ್ಲಿ ನಮ್ಮ ರಕ್ತವನ್ನು ಟೆಸ್ಟ ಮಾಡಬೇಕು ಎಂದರೆ ನನ್ನ ಹೆಂಡತಿಗೆ ಏನು ಸಂಶಯ ಬರಬೇಕು, ಬೆಳಿಗ್ಗೆ ಎದ್ದು ಪೇಪರ್ ಮಾಡಿ ನೋಡಿ ನಾನು ಇನ್ನೂ ತಿಂಡಿ ತಿಂದಿರಲಿಲ್ಲ, ಸ್ಪೀಕರ್‌ರವರೇ ಈ ಕೆಲಸ ಮಾಡಿದ್ದು ಅಂದಾಗ ನಮ್ಮ ಗತಿ ಏನಾಗಬೇಕು?

ಶ್ರೀ ವಾಟಾಳ್ ನಾಗರಾಜ್ : ಏನಾಗಿದೆಯೆಂದರೆ, ಅವರು ಬಂದು ತಮ್ಮ ದುಃಖವನ್ನು ನನ್ನ ಹತ್ತಿರ ಹೇಳಿಕೊಂಡರು. ಕೆಲವು ವಿಚಾರಗಳನ್ನು ಇಲ್ಲಿ ಬಹಿರಂಗಪಡಿಸಬಾರದು. ಆದರೆ ತಾವು ರಕ್ತ ಪರೀಕ್ಷೆ ಮಾಡಿ ಎಂದು ಹೇಳಿಬಿಟ್ಟಿರಿ.

ಅಧ್ಯಕ್ಷರು : ನಾನು ಹೇಳುವಾಗ ಮೆತ್ತಗೆ ಹೇಳಿದೆ, ಇಲ್ಲಿ ಎರಡು ಮೈಕ್ ಇಟ್ಟಿದ್ದಾರೆ ಅದು ಗ್ರಹಚಾರಕ್ಕೆ ಹೊರಗೆ ಬಂದುಬಿಟ್ಟಿತ್ತು.

ದಯಮಾಡಿ ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಬೆಳಿಗ್ಗೆ ಯೋಗೀಶಭಟರವರು ಅಲ್ಲಿಗೆ ಬಂದಿದ್ದಾಗ ಒಂದು ಮಾತು ಹೇಳಿದರು, ಆಳುವ ಪಕ್ಷ ಮತ್ತು ವಿರೋಧಪಕ್ಷಗಳ ನಡುವೆ ಪೈಪೋಟಿ ಇರಲಿ, ಯಾರು ಹೆಚ್ಚಿಗೆ ಕೊಡುತ್ತಾರೆ ಎಂಬತಕ್ಕಂಥದ್ದು ಇತ್ಯರ್ಥ ಆಗಲಿ ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಳುವ ಪಕ್ಷದಲ್ಲಿ ರಕ್ತ ಜಾಸ್ತಿ ಇದೆ, ವಿರೋಧಪಕ್ಷದಲ್ಲಿ ರಕ್ತ ಕಡಿಮೆ ಇದೆ. ಆದ್ದರಿಂದ ಆಳುವ ಪಕ್ಷದವರು ಹೆಚ್ಚಿಗೆ ಕೊಡುತ್ತಾರೆ ಎಂಬತಕ್ಕಂಥದ್ದು ಇತ್ಯರ್ಥ ಆಗಲಿ ಎಂದು ಹೇಳಿದರು.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಳುವ ಪಕ್ಷದಲ್ಲಿ ರಕ್ತ ಜಾಸ್ತಿ ಇದೆ, ವಿರೋಧಪಕ್ಷದಲ್ಲಿ ರಕ್ತ ಕಡಿಮೆ ಇದೆ. ಆದ್ದರಿಂದ ಆಳುವ ಪಕ್ಷದವರು ಹೆಚ್ಚಿಗೆ ಕೊಟ್ಟರೆ ಉತ್ತಮ ಎಂದು ನನಗೆ ಅನಿಸುತ್ತದೆ.

ಶ್ರೀವಾಟಾಳ್ ನಾಗರಾಜ್ : ನಾವೆಲ್ಲಾ ಚಳುವಳಿ ಮಾಡಿ, ಹೋರಾಟ ಮಾಡಿ ರಕ್ತ ಕಡಿಮೆಯಾಗಿ ಹೋಗಿದೆ. ಆದ್ದರಿಂದ ಆಳುವ ಪಕ್ಷದಿಂದಲೇ ಕೊಡಿಸಿಬಿಡಿ.